## ವೈಯಕ್ತಿಕ ಸಂಪರ್ಕ ಕಾರ್ಯಕ್ರಮ (PCP)

"ಕಲಿಕಾರ್ಥಿಗಳು ಕಲಿಕಾ ಅನುಭವಗಳನ್ನು ಹಂಚಿಕೊಳ್ಳಲು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕಲಿಕಾ ಕ್ರಮದಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಇರುವ ವ್ಯವಸ್ಥೆಯೇ ವೈಯಕ್ತಿಕ ಸಂಪರ್ಕ ಕಾರ್ಯಕ್ರಮ". (Personal Contact Programme) ಈ ಕಾರ್ಯಕ್ರಮದ ಮೂಲಕ ಕಲಿಕೆಗೆ ಬೆಂಬಲಿಸಲಾಗಿದೆ.

ಹಾಜರಾತಿ ಕಡ್ಡಾಯವಲ್ಲದಿದ್ದರೂ ವಿದ್ಯಾರ್ಥಿಗಳು ಹಾಜರಾಗುವುದರಿಂದ ಕಲಿಕಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮದಿಂದ ಬಹು ಉಪಯೋಗಗಳಿವೆ. ಪ್ರತಿ ವಿಷಯಕ್ಕೆ ಒಂದು ಗಂಟೆಯ 30 ಅವಧಿಯಂತೆ, 3 ತಿಂಗಳ ಅವಧಿಯಲ್ಲಿ ಸಿದ್ಧಪಡಿಸಿದ ಪೂರ್ವನಿಗದಿತ ವೇಳಾ ಪಟ್ಟಿಯಂತೆ ಶನಿವಾರ, ಭಾನುವಾರ ಹಾಗೂ ಸರ್ಕಾರಿ ರಜೆ ದಿನಗಳಂದು ಮಾತ್ರ ಕಲಿಕಾ ಅಧ್ಯಯನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಸಂಪರ್ಕ ತರಗತಿಗಳನ್ನು ನಡೆಸಲಾಗುತ್ತದೆ.

## ಸಂಪರ್ಕ ಕಾರ್ಯಕ್ರಮಗಳ ಉದ್ದೇಶಗಳು

- ವಿದ್ಯಾರ್ಥಿಗಳು ಕಲಿಕಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು
- ಸಹಪಾಠಿಗಳೊಡನೆ ಸಂವಹನ ನಡೆಸಲು
- ಬೋಧಕರಿಂದ ಅಭ್ಯಾಸಕ್ರಮದ ಸಲಹೆ ಪಡೆಯಲು ಹಾಗೂ ಹೆಚ್ಚುವರಿ ವಿಷಯ ಸಂಗ್ರಹ ಮಾಡಲು
- ಪರೀಕ್ಷಾ ತಯಾರಿ, ಪ್ರಯೋಗಾಲಯ ತರಬೇತಿ ಅನುಭವ ಪಡೆದುಕೊಳ್ಳಲು
- ಆಂತರಿಕ ಅಂಕ ನೀಡಲು ಕಿರು ಪರೀಕ್ಷೆ ಹಾಗೂ ನಿಯೋಜನಾ ಕಾರ್ಯ ಕೈಗೊಳ್ಳಲು
- ವಿದ್ಯಾರ್ಥಿಗಳು ತಮ್ಮ ಕಲಿಕಾ ಮಟ್ಟದ ಸ್ವ ಮೌಲ್ಯಮಾಪನ ಮಾಡಿಕೊಳ್ಳಲು

"ಕಲಿಕಾ ಸಾಮಗ್ರಿ ಹಾಗೂ ಸಂಪನ್ಮೂಲಗಳ ಸೂಕ್ತ ಬಳಕೆ ಮಾಡಿಕೊಳ್ಳುವುದರಿಂದ ಕಲಿಕಾರ್ಥಿಗಳಿಗೆ ಕಲಿಕೆ ಉಲ್ಲಾಸಕರ"

## ಹೊಸ ಕಲಿಕಾ ಕೇಂದ್ರ

ಪ್ರತಿ ವರ್ಷ ರಾಜ್ಯದಾದ್ಯಂತ ಇರುವ ಖಾಸಗಿ / ಸರ್ಕಾರದ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿ ಅರ್ಹ ಸಂಸ್ಥೆಗಳಿಗೆ ಹೊಸದಾಗಿ ಕಲಿಕಾ ಕೇಂದ್ರ ಪ್ರಾರಂಭಿಸಲು ಮಾನ್ಯತೆ ನೀಡಲಾಗುತ್ತದೆ. ಹೊಸದಾಗಿ ಕಲಿಕಾ ಕೇಂದ್ರ ಪ್ರಾರಂಭಿಸಲು ಇಚ್ಛಿಸುವ ರಾಜ್ಯದ ಸಂಸ್ಥೆಯವರು ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯವು ನಿಗದಿಪಡಿಸಿರುವ ಅರ್ಜಿ ನಮೂನೆ ಪಡೆದು ಭರ್ತಿಮಾಡಿ ದೃಢೀಕೃತ ಅಗತ್ಯ ದಾಖಲೆ ಪತ್ರಗಳೊಂದಿಗೆ ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಬೇಕು.

## ಕಲಿಕಾ ಕೇಂದ್ರಗಳ ಮಾನ್ಯತೆ / ನವೀಕರಣ

ಸಂಸ್ಥೆಗಳಿಂದ ಬಂದ ಪ್ರಸ್ತಾವನೆಯನ್ನು ಮುಕ್ತ ವಿದ್ಯಾಲಯವು ಪರಿಶೀಲಿಸಿ, ಸ್ಥಳಕ್ಕೆ ಭೇಟಿ ನೀಡಿ ಅಪೇಕ್ಷಿತ ಸೌಲಭ್ಯಗಳು ಲಭ್ಯವಿದ್ದಲ್ಲಿ ಎರಡು ವರ್ಷಗಳವರೆಗೆ ಅರ್ಹ ಸಂಸ್ಥೆಗಳಿಗೆ ಹೊಸದಾಗಿ ಮಾನ್ಯತೆ ನೀಡಲಾಗುತ್ತದೆ. ಪ್ರತಿ ಎರಡು ವರ್ಷಕ್ಕೊಮ್ಮೆ ವಿದ್ಯಾಲಯದಿಂದ ಕಲಿಕಾ ಅಧ್ಯಯನ ಕೇಂದ್ರದ ಮಾನ್ಯತೆ ನವೀಕರಿಸಿಕೊಳ್ಳುವುದು ಕಡ್ಡಾಯ. ಸಂಸ್ಥೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ನು ತಪ್ಪದೆ ಕಲಿಕಾ ಕೇಂದ್ರಗಳು ಪಾಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಕಛೇರಿಯನ್ನು ಸಂಪರ್ಕಿಸಿ. ಪ್ರಸ್ತುತ ಇರುವ ಕಲಿಕಾ ಅಧ್ಯಯನ ಕೇಂದ್ರಗಳ ವಿವರ ಮತ್ತು ಮುಕ್ತ ವಿದ್ಯಾಲಯದ ಮಾಹಿತಿಗಾಗಿ WEB: WWW.JSSKOS.COM ವೀಕ್ಷಿಸಿ.

## 10ನೇ ತರಗತಿ ಪರೀಕ್ಷೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪರೀಕ್ಷೆ ನಡೆಸುವ, ಮೌಲ್ಯಮಾಪನ ಮಾಡುವ, ಅಂಕಪಟ್ಟಿ ವಿತರಿಸುವ ಕಾರ್ಯ ನಡೆಯುತ್ತದೆ. ಕರ್ನಾಟಕ ಮುಕ್ತ ವಿದ್ಯಾಲಯದ ಪರೀಕ್ಷೆಗಳು ಸಾಧಾರಣವಾಗಿ ಇತರ ಶೈಕ್ಷಣಿಕ ಪರೀಕ್ಷೆಗಳಂತೆ ವಾರ್ಷಿಕವಾಗಿ ಎರಡು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಮುಖ್ಯ ಪರೀಕ್ಷೆಯು ಮಾರ್ಚ್/ಏಪ್ರಿಲ್ ತಿಂಗಳಲ್ಲಿಯು ಮತ್ತು ಪುನರಾವರ್ತಿತ ಪರೀಕ್ಷೆಗಳು ಜೂನ್/ಜುಲೈ ತಿಂಗಳಲ್ಲಿ ಸಾಮಾನ್ಯವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಂದರ್ಭದಲ್ಲಿಯೇ ನಡೆಸಲಾಗುತ್ತದೆ. ವಿಶೇಷ ಕಾರಣಗಳಿಂದಾಗಿ ಪರೀಕ್ಷೆಗಳನ್ನು ಮುಂದೂಡುವ ಸಂಭವವಿರುತ್ತದೆ.

## ಪ್ರಶ್ನೆಪತ್ರಿಕೆ

ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳು ಸಾಮಾನ್ಯವಾಗಿ ಜ್ಞಾನ, ಗ್ರಹಿಕೆ ಮತ್ತು ಅನ್ವಯ ವಿಷಯಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗಿಂತ ಗ್ರಹಿಕೆ ಮತ್ತು ಅನ್ವಯ ಪ್ರಶ್ನೆಗಳಿಗೆ ಹೆಚ್ಚು ಒತ್ತು ನೀಡಲಾಗಿರುತ್ತದೆ.

ಪ್ರಶ್ನೆಗಳು ಸಾಧಾರಣವಾಗಿ ಸುಲಭ, ಸಾಧಾರಣ ಮತ್ತು ಕಠಿಣಕ್ಕೆ ಸಂಬಂಧಿಸಿದಂತಿರುತ್ತವೆ. ಇವುಗಳಲ್ಲಿ ನೂತನ ವಸ್ತುನಿಷ್ಠ ಮಾದರಿ ಪ್ರಶ್ನೆಗಳು, ತುಂಬಾ ಚಿಕ್ಕ ಉತ್ತರ ಪ್ರಶ್ನೆಗಳು, ಚಿಕ್ಕ ಉತ್ತರ ಪ್ರಶ್ನೆಗಳು ಪ್ರಬಂಧ ರೀತಿಯ ಪ್ರಶ್ನೆಗಳನ್ನು ಪ್ರತಿ ವಿಷಯಗಳಲ್ಲಿನ ಪ್ರಶ್ನೆಪತ್ರಿಕೆ ಒಳಗೊಂಡಿರುತ್ತದೆ. ವಿದ್ಯಾರ್ಥಿಯು ತೇರ್ಗಡೆ ಹೊಂದಲು 625 ಅಂಕಗಳಿಗೆ ಕನಿಷ್ಠ 219 ಅಂಕ ಪಡೆದಿರಬೇಕು (ಶೇ.35). ವಿದ್ಯಾರ್ಥಿಯು ತೇರ್ಗಡೆಗೆ ಪ್ರತಿ ವಿಷಯದಲ್ಲಿ ಕನಿಷ್ಠ ಶೇ.30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರಬೇಕು.

## ಮುಖ್ಯಸ್ಥರ ನುಡಿ

ದೂರ ಶಿಕ್ಷಣ ಮತ್ತು ಮುಕ್ತ ಕಲಿಕಾ ಶಿಕ್ಷಣ ಪದ್ಧತಿಯು, ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಿಂದ ವಂಚಿತರಾಗಿ ನೇರವಾಗಿ ಶಾಲೆಗೆ ಹಾಜರಾಗಲು ಸಾಧ್ಯವಾಗದ ಯುವಜನತೆಗೆ ಕಲಿಕೆಯನ್ನು ಪೂರೈಸಲು ಮತ್ತು ನಾನಾ ಕಾರಣಗಳಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟ ಮಕ್ಕಳಿಗೆ ಶಿಕ್ಷಣ ನೀಡುವ ಒಂದು ಮಹತ್ತರವಾದ ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮವಾಗಿದೆ. ಪ್ರಸ್ತುತ ಕಾಲಕ್ಕೆ ಅನ್ವಯವಾಗುವಂತೆ ವಿದ್ಯಾರ್ಥಿಗಳನ್ನು ಸಾಮಾಜಿಕ ಬದಲಾವಣೆಯ ರೂವಾರಿಗಳನ್ನಾಗಿ ರೂಪಿಸುವ ಉದ್ದೇಶದಿಂದಲೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲು ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯದಿಂದ ಪೂಜ್ಯರ ಆಶೀರ್ವಾದ ಹಾಗೂ ವಿದ್ಯಾಪೀಠದ ಉನ್ನತ ಅಧಿಕಾರಿಗಳ ಸಹಕಾರದಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ದೃಷ್ಟಿಕೋನದ ಬುನಾದಿಗೆ ಅನುಗುಣವಾಗಿ ಕಾರ್ಯ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಇಂದಿನ ಯುವಕ/ಯುವತಿಯರು ತರಗತಿಗೆ ಹೋಗಿ ಕಲಿಯಲು ಆಸಕ್ತಿ ತೋರದೆ ಸ್ವತಃ ತಾವೇ ಕಲಿಯಲು ಉತ್ಸುಕರಾಗುತ್ತಿದ್ದಾರೆ. ತನ್ನದೇ ಆದ ಕಲಿಕಾ ರೀತಿ ಮತ್ತು ಅಂತರಜಾಲ ವ್ಯವಸ್ಥೆಯಿಂದ ಕಲಿಯುವ ದಾಹ ವಿದ್ಯಾರ್ಥಿಗಳಲ್ಲಿ ಹೆಚ್ಚಾಗುತ್ತಿದೆ. ಸಿದ್ಧ ಕಲಿಕಾ ಪಠ್ಯ ವಿಷಯಗಳನ್ನು ಆಧುನಿಕ ತಂತ್ರಜ್ಞಾನದಿಂದ ಕಲಿಕೆಗೆ ವರ್ಗಾವಣೆಗೊಳಿಸಿಕೊಳ್ಳುವ ಬುದ್ಧಿವಂತಿಕೆಯನ್ನು ವಿದ್ಯಾರ್ಥಿಗಳು ತೋರುತ್ತಿದ್ದಾರೆ. ಶೈಕ್ಷಣಿಕ ಕಲಿಕೆಯಲ್ಲಿನ ಸವಾಲನ್ನು ಸ್ವೀಕರಿಸುತ್ತಾ, ತಮ್ಮ ಶಿಕ್ಷಣವನ್ನು ಮುಕ್ತ ವಿದ್ಯಾಲಯ/ದೂರ ಶಿಕ್ಷಣದಿಂದ ಮುಂದುವರೆಸಲು ಮುಕ್ತ ವಿದ್ಯಾಲಯವನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಮುಕ್ತ ವಿದ್ಯಾಲಯದ ಮೂಲಕ ಪಡೆಯುವ ಶಿಕ್ಷಣವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಂಪ್ರದಾಯಕ ಶಿಕ್ಷಣಕ್ಕೆ ಸರಿಸಮಾನವಾಗಿದೆ.

ಸದ್ಯದಲ್ಲಿಯೇ 2020ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ 21ನೇ ಶತಮಾನಕ್ಕೆ ಪೂರಕ ಎನಿಸುವ ಸುಭದ್ರ ಅಡಿಪಾಯದ ಶಿಕ್ಷಣ ನೀಡಲು ಬೇಕಾದ ಅಗತ್ಯ ಬದಲಾವಣೆ ಯೊಂದಿಗೆ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲು ನಮ್ಮ ಸಂಸ್ಥೆಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಶಿಕ್ಷಣವಂಚಿತರಿಗೆ ಶಿಕ್ಷಣವನ್ನು ವಿದ್ಯಾರ್ಥಿಗಳ ಮನೆ ಬಾಗಿಲಿಗೆ ಕೊಂಡೊಯ್ಯುವ ಮಹತ್ತರ ಕಾರ್ಯ ಕೈಗೊಳ್ಳಲಾಗಿದೆ.

ವಿದ್ಯಾರ್ಥಿ ಮತ್ತು ಸಮಾಜದ ಪ್ರಸ್ತುತ ಅಗತ್ಯದ ಬೇಡಿಕೆಗೆ ಅನುಗುಣವಾದ ಕೌಶಲ್ಯಾಧಾರಿತ, ಅಲ್ಪಾವಧಿ ವೃತ್ತಿಶಿಕ್ಷಣ ಕೋರ್ಸ್‌ಗಳ ಜೊತೆಗೆ ಉನ್ನತ ಸೆಕೆಂಡರಿ/12ನೇ ತರಗತಿ ಶಿಕ್ಷಣವನ್ನು ಸದ್ಯದಲ್ಲಿಯೇ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯದಿಂದ ಪ್ರಾರಂಭಿಸಲು ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತಿದೆ.

ಈ ಕಾರ್ಯಕ್ರಮದ ವಾಹಿನಿಯಲ್ಲಿ ಸೇರುತ್ತಿರುವ ವಿದ್ಯಾರ್ಥಿಗಳಿಗೂ ಹಾಗೂ ಕಲಿಕಾ ಅಧ್ಯಯನ ಕೇಂದ್ರಗಳನ್ನು ಹೊಸದಾಗಿ ತೆರೆಯಲು ಬಯಸುವ ಸಂಸ್ಥೆಗಳ ಗಣ್ಯರುಗಳನ್ನು ಸ್ವಾಗತಿಸುತ್ತಾ ತಮ್ಮೆಲ್ಲರಿಗೂ ಶುಭ ಕೋರುತ್ತೇನೆ.

ಸಿ.ಎಸ್. ಶಿವಸ್ವಾಮಿ
ಮೊ. 9449820714

ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಮೈಸೂರು

(ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಶಾಶ್ವತ ಮಾನ್ಯತೆ ಪಡೆದ ಸ್ವಾಯತ್ತ ಸಂಸ್ಥೆ)

# ಪರಿಚಯ ಪತ್ರಿಕೆ

## ಸೆಕೆಂಡರಿ ಮತ್ತು ಉನ್ನತ ಸೆಕೆಂಡರಿ ಶಿಕ್ಷಣ

( 10th/SSLC - 12th/PUC )




**ಶಿಕ್ಷಣ ವಂಚಿತರಿಗಾಗಿ ಶಿಕ್ಷಣ**

*Reach the Unreach*

ಸಿ.ಎ. ನಂ. 5, 5ನೇ ಮುಖ್ಯ ರಸ್ತೆ, ಬಸವೇಶ್ವರ ಬ್ಲಾಕ್
ಡಾ. ರಾಧಾಕೃಷ್ಣನ್ ನಗರ, ಶಿಕ್ಷಕರ ಬಡಾವಣೆ, ಮೈಸೂರು-570 029
ದೂರವಾಣಿ: 0821-2548269
Email : jsskos99@gmail.com
jsskar.openschool_mysore@yahoo.com
Web : WWW.JSSKOS.COM

## ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

ಕಪಿಲಾ ನದಿ ತೀರದಲ್ಲಿರುವ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಪೂಜ್ಯರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವನ್ನು ಒಂದು ಸಾವಿರ ವರ್ಷಗಳ ಹಿಂದೆ ಸಂಸ್ಥಾಪಿಸಿದರು. ಶ್ರೀಮಠದ 23ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು 1954ರಲ್ಲಿ ಪ್ರಾರಂಭಿಸಿ ಅದರ ಮೂಲಕ ದೇಶದಾದ್ಯಂತ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಪ್ರಗತಿದಾಯಕದತ್ತ ಮುನ್ನಡೆಸಿದ್ದಾರೆ. ಮಹಾವಿದ್ಯಾಪೀಠವು ಈವರೆಗೆ ಸಾಧಿಸಿರುವ ಯಶಸ್ಸಿನ ಸಿಂಹಪಾಲು ಶ್ರೀಗಳವರ ಪ್ರೇರಣೆಯ ಫಲವಾಗಿದೆ. ಮಾನವಾಭಿವೃದ್ಧಿಯ ಮೂಲಕ ಜೀವನದ ಗುಣಮಟ್ಟವನ್ನು ಸುಧಾರಿಸುವತ್ತ ನಿರ್ದಿಷ್ಟವಾದ, ವಿಶಾಲವಾದ ದೃಷ್ಟಿಕೋನದ ಗುರಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠವು ಇಟ್ಟುಕೊಂಡಿದೆ.

24ನೇ ಮಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು 1986 ರಿಂದ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಇದರ ಅಂಗಸಂಸ್ಥೆಗಳ ಮೂಲಕ ದೇಶ ವಿದೇಶಗಳಲ್ಲಿ ಧರ್ಮ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣ ಅಭಿವೃದ್ಧಿ ಸಮಾಜ ಸುಧಾರಣೆ ಇಂತಹ ಹಲವಾರು ಕ್ಷೇತ್ರಗಳಲ್ಲಿ ಶ್ರೀಮಠದ ಪರಂಪರೆಯ ಅನುಸಾರ ದಾರಿ ತೋರಿ ಮುನ್ನಡೆಸುತ್ತಾ ಬಂದಿದ್ದಾರೆ.

ಪೂಜ್ಯರು ಆರೋಗ್ಯ ವಿಜ್ಞಾನ ಆಧಾರಿತ ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯವಾದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ಮತ್ತು ಖಾಸಗಿ ತಾಂತ್ರಿಕ ವಿಶ್ವವಿದ್ಯಾನಿಲಯವಾದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಾಗಿದ್ದಾರೆ. ಶ್ರೀಗಳವರ ವಿಶಾಲ ದೂರದೃಷ್ಟಿ ಮತ್ತು ಜಾಗತಿಕ ದೃಷ್ಟಿಕೋನದ ಫಲವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠವು ಇಂದು ಕರ್ನಾಟಕ ಮಾತ್ರವಲ್ಲದೇ ರಾಷ್ಟ್ರದ ಗಡಿಯನ್ನು ದಾಟಿ ತನ್ನ ಕಾರ್ಯಚಟುವಟಿಕೆಗಳನ್ನು ಅಭಿವೃದ್ಧಿ ಪಥದತ್ತ ವಿಸ್ತರಿಸಿದೆ.

ಪೂರ್ವ ಪ್ರಾಥಮಿಕ ಶಿಶುಕೇಂದ್ರದಿಂದ ಸ್ನಾತಕೋತ್ತರ ಹಂತದವರೆಗೆ, ವಿವಿಧ ಸ್ತರದ ಸಂಸ್ಥೆಗಳಾದ ತಾಂತ್ರಿಕ, ವೈದ್ಯಕೀಯ, ಉನ್ನತ ಸಂಶೋಧನಾ ಮತ್ತಿತರ ಸ್ನಾತಕೋತ್ತರ ಸಂಸ್ಥೆಗಳನ್ನು ಒಳಗೊಂಡಂತೆ 300ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳ ಜೊತೆಗೆ ವೃದ್ಧಾಶ್ರಮಗಳು, ಸಹಕಾರಿ ಸಂಸ್ಥೆಗಳು, ಆಸ್ಪತ್ರೆಗಳು, ಗ್ರಾಮೀಣ ಅಭಿವೃದ್ಧಿ ಕೇಂದ್ರಗಳು, ಅನಾಥಾಲಯ ಮತ್ತು ವೃತ್ತಿ ಶಿಕ್ಷಣ ಕೇಂದ್ರಗಳಂತಹ ನೂರಾರು ಸಂಸ್ಥೆಗಳನ್ನು ಮುನ್ನಡೆಸುತ್ತಾ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯಚಟುವಟಿಕೆಗಳ ನಿರ್ವಹಣೆಯಲ್ಲಿ ಶ್ರೀಗಳವರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಇದರ ಜೊತೆಗೆ ಸಾಂಪ್ರದಾಯಿಕ ಶಾಲೆಯನ್ನು ಮಧ್ಯಂತರದಲ್ಲಿ ತೊರೆದ ವಿದ್ಯಾರ್ಥಿಗಳ ಸಲುವಾಗಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಜೆಎಸ್‌ಎಸ್ ಕರ್ನಾಟಕ ಮುಕ್ತ ಶಾಲೆಯನ್ನು 1999–2000 ರಲ್ಲಿ ಸ್ಥಾಪಿಸಲಾಗಿದೆ.

## ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ

ಈ ಸಂಸ್ಥೆ ಕೇಂದ್ರ ಸರ್ಕಾರದ (National Institute of Open Schooling) ಮತ್ತು ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದ, ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಿತ ಅಂಗ ಸಂಸ್ಥೆಯಾಗಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ಪರ್ಯಾಯವಾಗಿ, ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆ (ಎನ್‌ಓಎಸ್) ಯು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ (ಶಿಕ್ಷಣ ಸಚಿವಾಲಯ) ಅಡಿಯಲ್ಲಿ ರಾಷ್ಟ್ರದಾದ್ಯಂತ ನಾನಾ ಕಾರಣಗಳಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟು ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಶಿಕ್ಷಣದ ಪ್ರಮುಖ ವಾಹಿನಿಗೆ ತರಲು ಹಾಗೂ ಕರ್ತವ್ಯನಿರತ ನೌಕರರು ಸ್ಥಗಿತಗೊಳಿಸಿದ್ದ ತಮ್ಮ ಶಿಕ್ಷಣವನ್ನು ಮುಂದುವರಿಸಲು ರಾಷ್ಟ್ರೀಯ ಮುಕ್ತ ವಿದ್ಯಾಲಯದಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

ಕರ್ನಾಟಕ ಸರ್ಕಾರವು ಮುಕ್ತ ಶಿಕ್ಷಣ ಸಂಸ್ಥೆ ಮೂಲಕ ಶಿಕ್ಷಣ ವಂಚಿತರಿಗೆ ಶಿಕ್ಷಣ ನೀಡಲು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠಕ್ಕೆ 1999–2000ದ ಸಾಲಿನಲ್ಲಿ ಕರ್ನಾಟಕ ಮುಕ್ತ ವಿದ್ಯಾಲಯ ತೆರೆಯಲು ಅನುಮತಿ ನೀಡಿರುತ್ತದೆ. (ಸರ್ಕಾರದ ಆದೇಶ ಸಂಖ್ಯೆ: ಇಡಿ:52 ಎಸ್‌ಇಎಸ್ 98 ಬೆಂಗಳೂರು, ದಿನಾಂಕ 22.12.2001). ಪ್ರಸ್ತುತ ಪ್ರೌಢಹಂತದ 10ನೇ/ಎಸ್‌ಎಸ್‌ಎಲ್‌ಸಿ ತರಗತಿಯ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಾ ಬಂದಿದೆ.

2006ರಲ್ಲಿ ಕರ್ನಾಟಕ ಸರ್ಕಾರವು **"ಕರ್ನಾಟಕ ಮುಕ್ತ ವಿದ್ಯಾಲಯದ ಪ್ರೌಢಹಂತದ 10ನೇ ತರಗತಿ ಶಿಕ್ಷಣವು ರೆಗ್ಯುಲರ್ ಎಸ್‌ಎಸ್‌ಎಲ್‌ಸಿ/ತತ್ಸಮಾನಕ್ಕೆ ಸಮ"** ಎಂಬ ಆದೇಶವನ್ನು ಹೊರಡಿಸಿದೆ. ಆದೇಶ ಸಂಖ್ಯೆ: ಇಡಿ 73 ಎಸ್‌ಎಲ್‌ಬಿ 2006, ಬೆಂಗಳೂರು. ದಿನಾಂಕ. 06.09.2006. ಈ ಆದೇಶದ ಪರಿಣಾಮದಿಂದಾಗಿ ಮುಕ್ತ ವಿದ್ಯಾಲಯದಲ್ಲಿ ಪ್ರವೇಶ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ **"ವ್ಯಾಸಂಗ ಮುಂದುವರಿಸಲು ಹಾಗೂ ಸರ್ಕಾರದ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹತೆ"** ಹೊಂದಿರುತ್ತಾರೆ.

ಮುಕ್ತ ವಿದ್ಯಾಲಯದ ವಿದ್ಯಾರ್ಥಿಗಳು ಕಲಿಕಾ ವೇಳೆ, ಕಲಿಯುವ ಸ್ಥಳ, ವಿಷಯಗಳ ಆಯ್ಕೆ, ಪರೀಕ್ಷೆ ತೆಗೆದುಕೊಳ್ಳುವ ಸಮಯ ಇತ್ಯಾದಿ ವಿಷಯಗಳಲ್ಲಿ ಮುಕ್ತ ಸ್ವಾತಂತ್ರ್ಯ ಹೊಂದಿರುತ್ತಾರೆ. ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯವು ಶಾಲಾ ಶಿಕ್ಷಣ ವಂಚಿತರಿಗೆ, ಶಿಕ್ಷಣವನ್ನು ವಿದ್ಯಾರ್ಥಿಗಳ ಮನೆಯ ಬಾಗಿಲಿಗೆ ಕೊಂಡೊಯ್ಯುವ ಮಹತ್ತರ ಕಾರ್ಯ ಮಾಡುತ್ತಿದೆ.

ಕಳೆದ ದಶಕಗಳಿಂದ 10ನೇ ತರಗತಿಗೆ 1,02,471 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಅವರಲ್ಲಿ 65,903 ವಿದ್ಯಾರ್ಥಿಗಳು ಉತ್ತೀರ್ಣ ಹೊಂದಿರುತ್ತಾರೆ.

## ವಿಶೇಷತೆಗಳು

- ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾದವರು ವಿದ್ಯಾಭ್ಯಾಸ ಮುಂದುವರಿಸಲು ಸಹಕಾರಿ.
- ರಾಜ್ಯದಾದ್ಯಂತ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕಲಿಕಾ ಅಧ್ಯಯನ ಕೇಂದ್ರಗಳ ಸ್ಥಾಪನೆ.
- ನಾನಾ ಕಾರಣದಿಂದಾಗಿ ಶಿಕ್ಷಣದಿಂದ ವಂಚಿತರಾದವರಿಗೆ ಹಾಗೂ ಅರೆಕಾಲಿಕ ಉದ್ಯೋಗಸ್ಥರು ಬಿಡುವಿನ ವೇಳೆಯಲ್ಲಿ ಶಿಕ್ಷಣ ಮುಂದುವರೆಸಲು ವರದಾನ.
- ಕೋರ್ಸ್ ಪೂರ್ಣಗೊಳಿಸಲು ಮೂರು ವರ್ಷಗಳ ಕಾಲಾವಧಿಯಲ್ಲಿ ಆರು ಬಾರಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ.
- ಆಡಿಯೋ, ವಿಡಿಯೋ ಕಾರ್ಯಕ್ರಮಗಳಿಂದ ಬೆಂಬಲಿತವಾದ ಮುದ್ರಿತ ಸ್ವಯಂ ಬೋಧನಾ ಅಧ್ಯಯನ ಸಾಮಗ್ರಿಗಳ ಲಭ್ಯತೆ.
- ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗಾಗಿ ಮೂರು ಭಾಷೆಯ ಬದಲು ಒಂದು ಭಾಷೆ ಮಾತ್ರ ಅಧ್ಯಯನ ಮಾಡಲು ಅವಕಾಶ.
- ವಿಕಲಚೇತನ ಮಕ್ಕಳಿಗೆ ಪರೀಕ್ಷೆ ಬರೆಯಲು ಮೂರು ಗಂಟೆ ಅವಧಿಯ ಪರೀಕ್ಷೆಗೆ ಒಂದು ಗಂಟೆ ಹೆಚ್ಚುವರಿ "ಪರಿಹಾರ ಅವಧಿ" ನೀಡಿಕೆ.
- ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕಲೇಟರ್ ಬಳಸಲು ಹಾಗೂ ಪೋಷಕರ ವೆಚ್ಚದಲ್ಲಿ ಬರಹಗಾರರನ್ನು ಹಾಗೂ ಪ್ರಶ್ನೆಪತ್ರಿಕೆ ಓದಲು ಸಹಾಯಕರನ್ನು ಪಡೆಯಲು ಅವಕಾಶ.

## ಪ್ರವೇಶ ಅರ್ಹತೆ (ಹತ್ತನೇ ತರಗತಿ)

- ಕಲಿಕಾರ್ಥಿ ಸಾಂಪ್ರದಾಯಿಕ ಶಾಲೆಯಲ್ಲಿ ಕನಿಷ್ಠ 7ನೇ ತರಗತಿ ಅಭ್ಯಸಿಸಿರಬೇಕು (ಉತ್ತೀರ್ಣ/ಅನುತ್ತೀರ್ಣ)
- 15 ವರ್ಷ ಮೇಲ್ಪಟ್ಟವರಾಗಿರಬೇಕು. 7ನೇ, 8ನೇ, 9ನೇ, 10ನೇ ತರಗತಿಯ ಸಾಂಪ್ರದಾಯಕ ಶಿಕ್ಷಣದಲ್ಲಿ ಅನುತ್ತೀರ್ಣರಾಗಿ ಹೊರಗುಳಿದ ಹಾಗೂ ನಾನಾ ಕಾರಣಗಳಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅರ್ಹರು.
- ವಿದ್ಯಾರ್ಥಿಗಳು ಇಚ್ಚಿಸುವ ಕಲಿಕಾ ಅಧ್ಯಯನ ಕೇಂದ್ರದಲ್ಲಿ ಪ್ರವೇಶ ಪಡೆಯಲು ಅವಕಾಶ.
- ಪ್ರವೇಶ ಸಂದರ್ಭದಲ್ಲಿ ಹಿಂದಿನ ಶಾಲೆಯ ವರ್ಗಾವಣೆ ಪತ್ರ, ವಿಳಾಸ ದೃಢೀಕರಣ ಪತ್ರ, ಕಲರ್ ಪಾಸ್‌ಪೋರ್ಟ್ ಫೋಟೋ ಹಾಗೂ ಆಧಾರ್ ಪ್ರತಿಗಳ ಝೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು.

## ಪಠ್ಯಕ್ರಮ / ಕಲಿಕಾ ಸಾಮಗ್ರಿ

ಕೇಂದ್ರ ಸರ್ಕಾರದ ಎನ್‌ಐಓಎಸ್‌ನಿಂದ ಅನುಮೋದಿತ ಪಠ್ಯಕ್ರಮ ಮತ್ತು ಕಲಿಕಾ ಸಾಮಗ್ರಿಗಳನ್ನು ಪಡೆದು ನುರಿತ ಅರ್ಹ ಪಠ್ಯವಿಷಯ ಪರಿಣಿತರಿಂದ ಕನ್ನಡ ಭಾಷೆಗೆ ಭಾಷಾಂತರಿಸಿ, ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯದಿಂದ ಅನುಮೋದನೆ ಪಡೆದು ಮುದ್ರಿತ ದೃಕ್‌ಶ್ರವಣ ಇತ್ಯಾದಿ ಕಲಿಕಾ ಸಾಮಗ್ರಿಯನ್ನು ಪಠ್ಯ ಪುಸ್ತಕ ರೂಪದಲ್ಲಿ ಸಿದ್ಧಪಡಿಸಿ ಕಲಿಕಾರ್ಥಿಗಳಿಗೆ ವಿತರಿಸಲಾಗುತ್ತಿದೆ, ಮುಂದೆ ಪಠ್ಯಕ್ಕೆ ಸಂಬಂಧಿಸಿದಂತೆ ಆಡಿಯೋ ವಿದ್ಯುನ್ಮಾನ ಸಾಧನ ಹೊರತರಲು/ಆನ್‌ಲೈನ್ ಮೂಲಕ ಪಠ್ಯ ಬೋಧನೆಗೆ ಯೋಜನೆ ರೂಪಿಸಲಾಗುತ್ತಿದೆ.

### ಅಧ್ಯಯನ ವಿಷಯಗಳ ಆಯ್ಕೆ
### 10ನೇ ತರಗತಿ

**ಭಾಷೆಗಳು: ಕನ್ನಡ, ಇಂಗ್ಲಿಷ್, ಹಿಂದಿ**

**ಐಚ್ಛಿಕ ವಿಷಯಗಳು**

ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ವಿಜ್ಞಾನ,
ಅರ್ಥಶಾಸ್ತ್ರ, ವಾಣಿಜ್ಯ ಅಧ್ಯಯನ, ಗೃಹ ವಿಜ್ಞಾನ ಜೊತೆಗೆ
ವೃತ್ತಿ ಶಿಕ್ಷಣ ವಿಷಯಗಳು

**(7 ವಿಷಯಗಳಲ್ಲಿ ಯಾವುದಾದರು 3 ವಿಷಯಗಳ ಆಯ್ಕೆ)**

**ಆಂತರಿಕ ಅಂಕಗಳು**

ಪ್ರತಿ ವಿಷಯಕ್ಕೆ 20 ಆಂತರಿಕ ಅಂಕಗಳನ್ನು ಮೀಸಲಿಟ್ಟು ಉಳಿದ ಅಂಕಗಳಿಗೆ ಮಾತ್ರ ಲಿಖಿತ ಪರೀಕ್ಷೆ ನಡೆಸಲು ಸರ್ಕಾರದಿಂದ ಆದೇಶ ಪಡೆಯಲು ಪ್ರಸ್ತಾವನೆಯನ್ನು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಗೆ ಸಲ್ಲಿಸಲಾಗಿದೆ.

### ಉನ್ನತ ಸೆಕೆಂಡರಿ / 12ನೇ ತರಗತಿ
### ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಗುಣವಾಗಿ ಪ್ರಾರಂಭಿಸಲು ಪ್ರಕ್ರಿಯೆ ಆರಂಭಿಸಲಾಗಿದೆ

**ಭಾಷೆಗಳು : ಕನ್ನಡ, ಇಂಗ್ಲಿಷ್, ಸಂಸ್ಕೃತ**

**ಐಚ್ಛಿಕ ವಿಷಯಗಳು (ನಾಲ್ಕು ವಿಷಯಗಳ ಆಯ್ಕೆ)**

ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಗೃಹವಿಜ್ಞಾನ, ಶಿಕ್ಷಣ, ತರ್ಕಶಾಸ್ತ್ರ, ವೃತ್ತಿ ಶಿಕ್ಷಣ ವಿಷಯಗಳು.